10. ಬೇಸ್ ಎಜುಕೇಷನಲ್ ಸರ್‌ವೀಸಸ್ (ಪ್ರೈ.ಲಿ), ಎಮ್.ಸಿ. ಬಡಾವಣೆ, ವಿಜಯನಗರ, ಬೆಂ.

ಈ) ಮೂಲಭೂತ ಸೌಕರ್ಯಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿಕೊಳ್ಳಬಹುದು.

ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಥಳಾವಕಾಶ, ನೀರಿನ ಸೌಲಭ್ಯ, ವಿದ್ಯುತ್, ಶೌಚಾಲಯ, ಗಾಳಿ, ಬೆಳಕು ಹಾಗೂ ಡೆಸ್ಕ್‌ಗಳು ಇರಬೇಕು.

ಗರಿಷ್ಠ ಸಂಖ್ಯೆ 40 ರಿಂದ 80 ರವರೆಗೆ ಸೇರ್ಪಡೆ ಮಾಡಿಕೊಳ್ಳಬಹುದು.

ಉ) ಟುಟೋರಿಯಲ್ ಪ್ರಾರಂಭಿಸುವ ಸಮಯದಲ್ಲಿ ರೂ. 25000/– ಗಳನ್ನು ಪಾವತಿಸಿದ ನಂತರ ಪ್ರತಿ ವರ್ಷ ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ.

ಟ್ಯೂಷನ್ ಸಂಸ್ಥೆಗಳು ವಿದ್ಯಾರ್ಥಿಗಳಿಂದ ಹಣ ವಸೂಲು ಮಾಡುತ್ತಿರುವ ಬಗ್ಗೆ ದೂರುಗಳು ಬಂದಿರುವುದಿಲ್ಲ.

ಊ) ದೂರುಗಳು ಬಂದಲ್ಲಿ ನಿಯಮ ಉಲ್ಲಂಘನೆ ಮಾಡಿದ ಕೋಚಿಂಗ್ ಸೆಂಟರ್‌ಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ರಾಜ್ಯ ವಿಶ್ವವಿದ್ಯಾಲಯದ ಮಾನ್ಯತೆ ರದ್ದಾಗಿರುವುದು

1442(2110); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ

ಅ) ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ (ಯುಜಿಸಿ) ವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕೋರ್ಸ್‌ಗಳಿಗೆ ನೀಡಲಾದ ಮಾನ್ಯತೆಯನ್ನು ರದ್ದುಪಡಿಸಿ ಆದೇಶ ಹೊರಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯುಜಿಸಿ ಯ ಈ ತೀರ್ಮಾನದಿಂದಾಗಿ ಮುಕ್ತ ವಿಶ್ವವಿದ್ಯಾಲಯದ ಸಹಸ್ರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಯುಜಿಸಿ ನಿರ್ಧಾರವನ್ನು ಹಿಂಪಡೆಯುವಂತೆ ಮಾಡಲು ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಬಂದಿದೆ

ಆ) ಹೌದು.

ಇ) ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿನ ಸೂಚನೆಯಂತೆ ಯುಜಿಸಿ ವಿಧಿಸಿರುವ ಷರತ್ತುಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಅನುಸರಣಾ ವರದಿಯನ್ನು ಯುಜಿಸಿಗೆ ಸಲ್ಲಿಸಿ, ಮಾನ್ಯತೆ ಮುಂದುವರೆಸುವಂತೆ ಯುಜಿಸಿಗೆ ಮನವಿ ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ಮಾರ್ಗದರ್ಶನ ನೀಡಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಕ್ರಮವಹಿಸುತ್ತಿದೆ.

ವಿವಿಧ ವಸತಿ ಯೋಜನೆಗಳ ಗುರಿ ಮತ್ತು ಸಾಧನೆಗಳು

1443(2378); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ವಸತಿ ಇಲಾಖೆ ಅನುಷ್ಠಾನಗೊಳಿಸಿದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ವಸತಿ ಗೃಹಗಳು ಮತ್ತು ನಿವೇಶನಗಳ ಸಂಖ್ಯಾವಾರು ವಿವರಗಳೇನು (ಜಿಲ್ಲಾವಾರು ಹಂಚಿಕೆಯ ವಿವರಗಳನ್ನು ನೀಡುವುದು);

ಆ) ವಸತಿ ಮತ್ತು ನಿವೇಶನಗಳ ಹಂಚಿಕೆ ಕುರಿತಾದ ಗುರಿ ಮತ್ತು ಸಾಧನೆಯ ವಿವರಗಳೇನು;